# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 571 |
| 2. | ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಬಿ.ಜಿ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3. | ಉತ್ತರಿಸಬೇಕಾದ ದಿನಾಂಕ | 18.08.2025 |
| 4 | ಉತ್ತರಿಸುವ ಸಚಿವರು | ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಕಾನೂನು ಮಾಪನಶಾಸ್ತ್ರ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಲಬುರಗಿ ರಾಜ್ಯ ಗ್ರಾಹಕರ ವ್ಯಾಜ್ಯ ಪರಿಹಾರ ಸಂಚಾರಿ ಪೀಠ ಪ್ರಾರಂಭಿಸಲಾಗಿದೆಯೇ; ಪ್ರಾರಂಭಿಸಲಾಗಿದ್ದಲ್ಲಿ, ಈ ಕಚೇರಿಯು ಎಲ್ಲಿ ಕಾರ್ಯ ನಿರ್ವಹಿಸುತ್ತಿದೆ; ಹಾಗೂ ಈ ಪೀಠಕ್ಕೆ ಇದುವರೆವಿಗೂ ವರ್ಗಾವಣೆಯಾದ/ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು; (ವಿವರ ನೀಡುವುದು) | ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಕಲಬುರಗಿ ಖಾಯಂ ಸಂಚಾರಿ ಪೀಠವು ದಿನಾಂಕ: 17.09.2024 ರಿಂದ ಕಾರ್ಯಾರಂಭ ಮಾಡಿರುತ್ತದೆ. ಸದರಿ ಪೀಠದ ಕಛೇರಿಯು ಕಲಬುರಗಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆ.<br><br>ಪ್ರಸ್ತುತ ಕಲಬುರಗಿ ಪೀಠಕ್ಕೆ ಮಂಜೂರಾಗಿರುವ ನ್ಯಾಯಾಂಗ ಸದಸ್ಯರು ಹಾಗೂ ಮಹಿಳಾ ಸದಸ್ಯರ ಹುದ್ದೆಗಳು ಭರ್ತಿಯಾಗದ ಕಾರಣ ಕಲಬುರಗಿ ಪೀಠದ ಕಲಾಪವನ್ನು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ಪ್ರತಿ ಮಂಗಳವಾರದಂದು ವಿಡಿಯೋ ಸಂವಾದದ ಮೂಲಕ ನಡೆಸಲಾಗುತ್ತಿರುತ್ತದೆ.<br><br>ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಖಾಯಂ ಸಂಚಾರಿ ಪೀಠಕ್ಕೆ ವರ್ಗಾಯಿಸಲಾಗಿರುವ ಹಾಗೂ ಸದರಿ ಪೀಠದಲ್ಲಿ ದಿನಾಂಕ: 30.06.2025 ರವರೆಗೆ ದಾಖಲಾಗಿರುವ, ಇತ್ಯರ್ಥವಾಗಿರುವ ಹಾಗೂ ಬಾಕಿಯಿರುವ ಪ್ರಕರಣಗಳ ವಿವರ ಈ ಕೆಳಕಂಡಂತಿರುತ್ತದೆ.<br><br>ಸೆಪ್ಟೆಂಬರ್-2024 ರಲ್ಲಿ ಬೆಂಗಳೂರಿನಿಂದ ವರ್ಗಾವಣೆಯಾದ ಪ್ರಕರಣಗಳು: 864<br>ಅಕ್ಟೋಬರ್-2024 ರಿಂದ ಜೂನ್-2025 ರವರೆಗೆ ದಾಖಲಾದ ಪ್ರಕರಣಗಳು: 248<br>ಅಕ್ಟೋಬರ್-2024 ರಿಂದ ಜೂನ್-2025 ರವರೆಗೆ ಇತ್ಯರ್ಥಗೊಂಡ ಪ್ರಕರಣಗಳು: 18<br>ಪ್ರಸ್ತುತ ಜೂನ್-2025 ರ ಅಂತ್ಯಕ್ಕೆ ಬಾಕಿಯಿರುವ ಪ್ರಕರಣಗಳು: 1094 |
| ಆ) | ಕಲಬುರಗಿ ಪೀಠಕ್ಕೆ ವರ್ಗಾವಣೆಯಾದ ಪ್ರಕರಣಗಳ ದಾಖಲೆಗಳನ್ನು ಪುನಃ ಬೆಂಗಳೂರಿಗೆ ಹಿಂತಿರುಗಿಸಲು ಕಾರಣಗಳೇನು; | ಕಲಬುರಗಿ ಪೀಠಕ್ಕೆ ಮಂಜೂರಾಗಿರುವ ನ್ಯಾಯಾಂಗ ಸದಸ್ಯರು ಹಾಗೂ ಮಹಿಳಾ ಸದಸ್ಯರು ಹುದ್ದೆಗಳು ಭರ್ತಿಯಾಗದ ಕಾರಣ ಕಲಬುರಗಿ ಪೀಠದ ಕಲಾಪವನ್ನು ಕರ್ನಾಟಕ ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗ, ಬೆಂಗಳೂರು ಇಲ್ಲಿ ಪ್ರತಿ ಮಂಗಳವಾರದಂದು ವಿಡಿಯೋ ಸಂವಾದದ ಮೂಲಕ ನಡೆಸಲಾಗುತ್ತಿರುವುದರಿಂದ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಕಡತಗಳನ್ನು ಹಿಂಪಡೆಯಲಾಗಿರುತ್ತದೆ. |

| | | |
|---|---|---|
| ಇ) | ರಾಜ್ಯ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಖಾಯಂ ಸಂಚಾರಿ ಪೀಠಗಳಿಗೆ ಅನುಮೋದನೆಯಾದ ಹುದ್ದೆಗಳ ಸಂಖ್ಯೆ ಎಷ್ಟು; ಸದರಿ ಹುದ್ದೆಗಳಿಗೆ ಹಣಕಾಸು ಇಲಾಖೆಯ ಒಪ್ಪಿಗೆ ಇದ್ದರೂ ಹುದ್ದೆಗಳ ಕಡಿತಕ್ಕೆ ಕಾರಣಗಳೇನು; 371(ಜೆ) ರನ್ವಯ ಹುದ್ದೆಗಳ ನೇಮಕಾತಿಗೆ ನಿರ್ಬಂಧವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಆನಾಸ 43 ಸಲಘ 2020 ದಿನಾಂಕ: 17.06.2022 ರಲ್ಲಿ ಬೆಳಗಾವಿ ಖಾಯಂ ಸಂಚಾರಿ ಪೀಠಕ್ಕೆ ಅತ್ಯಗತ್ಯವಿರುವ 22 ಹುದ್ದೆಗಳನ್ನು ಮಂಜೂರು ಮಾಡಲಾಗಿತ್ತು. ಮುಂದುವರೆದು, ಆರ್ಥಿಕ ಇಲಾಖೆಯ ಅಭಿಪ್ರಾಯದನ್ವಯ ಸದರಿ ಆದೇಶವನ್ನು ಮಾರ್ಪಡಿಸಿ 12 ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ.<br><br>ಸರ್ಕಾರದ ಆದೇಶ ಸಂಖ್ಯೆ: ಆನಾಸ 54 ಸಲಘ 2022 ದಿನಾಂಕ: 07.06.2022 ರಲ್ಲಿ ಕಲಬುರಗಿ ಖಾಯಂ ಸಂಚಾರಿ ಪೀಠಕ್ಕೆ ಅತ್ಯಗತ್ಯವಿರುವ 22 ಹುದ್ದೆಗಳನ್ನು ಮಂಜೂರು ಮಾಡಲಾಗಿತ್ತು. ಮುಂದುವರೆದು, ಆರ್ಥಿಕ ಇಲಾಖೆಯ ಅಭಿಪ್ರಾಯದನ್ವಯ ಸದರಿ ಆದೇಶವನ್ನು ಮಾರ್ಪಡಿಸಿ 12 ಹುದ್ದೆಗಳನ್ನು ಮಂಜೂರು ಮಾಡಲಾಗಿರುತ್ತದೆ.<br><br>ಮುಂದುವರೆದು, 371(ಜೆ) ರನ್ವಯ ಹುದ್ದೆಗಳ ನೇಮಕಾತಿಗೆ ನಿರ್ಬಂಧವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆ. |

**ಸಂ: ಆನಾಸ 99 ಸಲಘ 2025 (1867152)**

(ಕೆ.ಹೆಚ್. ಮುನಿಯಪ್ಪ)
ಆಹಾರ, ನಾಗರಿಕ ಸರಬರಾಜು ಮತ್ತು
ಗ್ರಾಹಕರ ವ್ಯವಹಾರಗಳು ಹಾಗೂ
ಕಾನೂನು ಮಾಪನಶಾಸ್ತ್ರ, ಸಚಿವರು